




# ಕಳೆದ ದಿನಗಳ ನೆನಪುಗಳು

(ಸ್ವಾಮಿ ವಿರಜಾನಂದರ ಜೀವನ ಹಾಗೂ ಕೆಲವು ಸಮಕಾಲೀನ ಘಟನೆಗಳು)

ಮೂಲ ಬಂಗಾಳಿ: ಸ್ವಾಮಿ ಶ್ರದ್ಧಾನಂದ

ಅನುವಾದ: ಪ್ರವ್ರಾಜಿಕಾ ಯೋಗಾತ್ಮಪ್ರಾಣಾ

## ಭಾಗ ೯

**ಈ** ಸಮಯದಲ್ಲೇ, ಕಾಶಿಯ ಹೊರಭಾಗದಲ್ಲಿದ್ದ ಪ್ರಮದ ದಾಸ ಮಿತ್ರರ[೧] ತೋಟದ ಮನೆಯಲ್ಲಿ ಶ್ರೀರಾಮಕೃಷ್ಣರ ಕೆಲವು ಸಂನ್ಯಾಸೀ ಶಿಷ್ಯರಾದ ಸ್ವಾಮಿ ಯೋಗಾನಂದಜಿ, ಸ್ವಾಮಿ ಶಿವಾನಂದಜಿ, ಸ್ವಾಮಿ ಅಭೇದಾನಂದಜಿ, ಮುಂತಾದವರು ತಪಸ್ಸು ಮಾಡುತ್ತಿದ್ದರು. ಬೂಡೋ ಬಾಬಾ (ಸ್ವಾಮಿ ಸಚ್ಚಿದಾನಂದರು) ಸ್ವಲ್ಪ ಕಾಲದ ಹಿಂದಷ್ಟೇ ಸಂಸಾರ ತ್ಯಾಗ ಮಾಡಿ, ಸ್ವಾಮಿ ಶಾರದಾನಂದರ[೨] ಹತ್ತಿರ ಸಂನ್ಯಾಸ ಪಡೆದು ಅಲ್ಲಿಯೇ ವಾಸಿಸುತ್ತಿದ್ದರು. ಇವರೆಲ್ಲ ಮಧುಕರಿ ಮಾಡುತ್ತಿದ್ದರು; ಯಾವಾಗಲಾದರೊಮ್ಮೆ ದುಡ್ಡು ಸಿಕ್ಕಿದರೆ ತಂಬಾಕು, ಕಲ್ಲಿದ್ದಲು, ಮಣ್ಣಿನ ಗುಡುಗುಡಿ ಇತ್ಯಾದಿಗಳನ್ನು ಕೊಂಡು ತರುತ್ತಿದ್ದರು. ಕೆಲವು ದಿನಗಳು ತುಂಬ ಉಲ್ಲಾಸದಿಂದ ತಂಬಾಕು ಸೇವನೆ ನಡೆಯುತ್ತಿತ್ತು. ದುಡ್ಡು ಕರಗಿ ಹೋದಾಗ ಗುಡುಗುಡಿಯನ್ನು ಎಸೆದು ಬರುತ್ತಿದ್ದರು. ಕಾಳೀಕೃಷ್ಣರೀಗ ಶ್ರೀರಾಮಕೃಷ್ಣರ ಈ ಸಂನ್ಯಾಸೀ ಶಿಷ್ಯರ ಪುಣ್ಯ ಸಂಗವನ್ನು ಮಾಡಲಾರಂಭಿಸಿದರು. ಬೂಡೋ ಬಾಬಾ ಇವರಿಗೆ ಮಧುಕರಿ ಮಾಡುವುದನ್ನು ಕಲಿಸಿಕೊಟ್ಟಿದ್ದರು. ಗಂಟು ಹಾಕಿ ವಸ್ತ್ರವನ್ನುಟ್ಟು ಜೋಳಿಗೆ ಮತ್ತು ಬೋಗುಣಿಯನ್ನು ಹಿಡಿದು ಚಪಾತಿ, ತೊವ್ವೆಗಳನ್ನು ಹೇಗೆ ಭಿಕ್ಷೆ ಪಡೆಯಬೇಕು ಮುಂತಾಗಿ. ಕಾಳೀಕೃಷ್ಣರನ್ನು ಅವರು ತುಂಬ ಪ್ರೀತಿಸುತ್ತಿದ್ದರು. ಸ್ವಾಮಿ ಅದ್ವೈತಾನಂದರು ಮತ್ತು ಬೂಡೋ ಬಾಬಾ ಇವರುಗಳೊಂದಿಗೆ ಕಾಳೀಕೃಷ್ಣರು ಕಾಶಿಯಲ್ಲಿ 'ಪಂಚಕ್ರೋಶ' ಪ್ರದಕ್ಷಿಣೆಯನ್ನು ಕೈಗೊಂಡಿದ್ದರು. ಇದು ಸುಮಾರು ೨೨ ಕ್ರೋಶ ದೂರದ ಪ್ರದಕ್ಷಿಣೆ; ಅದಕ್ಕೆ ನಾಲ್ಕು ದಿನಗಳು ಹಿಡಿದವು. ಮಧ್ಯಾಹ್ನ ಎಲ್ಲಿಗೆ ತಲುಪುತ್ತಿದ್ದರೊ ಅಲ್ಲಿಯೇ ಅಡುಗೆ, ಊಟ ಮುಗಿಸಿ ವಿಶ್ರಮಿಸುತ್ತಿದ್ದರು; ಮಾರನೆಯ ದಿನ ಮುಂಜಾನೆ ಇತರರೊಡನೆ ಹೊರಡುತ್ತಿದ್ದರು. ರಾತ್ರಿ ಮರದಡಿಯಲ್ಲಿ ಆಸನ ಹರಡಿ ಇತರ ಸಾಧುಗಳಂತೆಯೇ ಮಲಗುತ್ತಿದ್ದರು. ಹೀಗೆ ಸುಮಾರು ಒಂದು ತಿಂಗಳ ಕಾಶೀವಾಸದ ನಂತರ ಮಾರ್ಗಮಧ್ಯದಲ್ಲಿ ಅಯೋಧ್ಯೆಯನ್ನು ಸಂದರ್ಶಿಸಿ ಕಾಳೀಕೃಷ್ಣರು ಬೃಂದಾವನವನ್ನು ತಲುಪಿದರು.



ಶ್ರೀರಾಮಕೃಷ್ಣರ ಗೃಹೀಭಕ್ತರಾದ ಬಲರಾಮಬಸುಗಳ ಗೃಹ ದೇವಾಲಯವಾದ ಕಾಲಾಬಾಬುವಿನ ಕುಂಜ[೩]ದಲ್ಲಿ ಬಾಬುರಾಮ್ ಮಹಾರಾಜರು ತಂಗಿದ್ದರು. ಕಾಳೀಕೃಷ್ಣರೂ ಸಹ ಅವರೊಂದಿಗೇ ಇರತೊಡಗಿದರು. ಜಪ-ಧ್ಯಾನ, ದೇವರ ದರ್ಶನ ಇತ್ಯಾದಿಗಳಲ್ಲಿ ಆನಂದದಿಂದ ಕಾಲ ಕಳೆಯತೊಡಗಿತು. ಶ್ರೀರಾಮಕೃಷ್ಣರ ಭಾವಚಿತ್ರವನ್ನು ಒಂದು ಮರದ ಪೀಠದ ಮೇಲಿಟ್ಟು ಬಾಬುರಾಮ್ ಮಹಾರಾಜರು ಅದಕ್ಕೆ ಪೂಜೆಯನ್ನು ಸಲ್ಲಿಸುತ್ತಿದ್ದರು. ನೈವೇದ್ಯಕ್ಕೆ ಕೇವಲ ಕಲ್ಲುಸಕ್ಕರೆಯನ್ನಷ್ಟೇ ನೀಡುತ್ತಿದ್ದರು.

---

೧ ಇವರು ಕಾಶಿಯ ಒಬ್ಬ ಧರ್ಮನಿಷ್ಠ ಜಮೀನ್ದಾರರು. ಇವರು ಸ್ವಾಮೀಜಿ ಮತ್ತಿತರ ಶಿಷ್ಯರ ಸಂಪರ್ಕಕ್ಕೆ ಬಂದು ಶ್ರೀರಾಮಕೃಷ್ಣರ ಪರಮಭಕ್ತರಾಗಿದ್ದರು. ಇವರಿಂದ ರಚಿಸಲ್ಪಟ್ಟ ''ವಿಶುದ್ಧವಿಜ್ಞಾನಮಗಾಧಸೌಖ್ಯಂ...'' ಎಂಬ ಪ್ರಖ್ಯಾತ ಸ್ತೋತ್ರವು ಶ್ರೀರಾಮಕೃಷ್ಣರ ಭಕ್ತವೃಂದದಲ್ಲಿ ವಿಶೇಷವಾಗಿ ಆದರಣೆ ಪಡೆದಿದೆ. ಸ್ವಾಮೀಜಿಯವರು ಈ ಪ್ರಮದ ಬಾಬುಗಳಿಗೆ ಬರೆದ ಅನೇಕ ಪತ್ರಗಳು 'ಸ್ವಾಮಿ ವಿವೇಕಾನಂದರ ಪತ್ರಮಾಲೆ' ಎಂಬ ಗ್ರಂಥದಲ್ಲಿ ಮುದ್ರಿತವಾಗಿವೆ.

೨ ಇದಕ್ಕೂ ಮೊದಲು ಬೂಡೋ ಬಾಬಾರವರು ಕಾಶಿಯಲ್ಲಿ ಸ್ವಾಮಿ ಯೋಗಾನಂದರಿಂದಲೂ ಸಾಧನೆಯ ಕೆಲವು ಉಪದೇಶಗಳನ್ನು ಪಡೆದಿದ್ದರು.

೩ ವಿಖ್ಯಾತ ಜಮೀನ್ದಾರರೂ, ಭಕ್ತಾಗ್ರಣಿಯೂ ಆದ ಲಾಲಾಬಾಬುಗಳು ಬೃಂದಾವನದಲ್ಲಿ ಶ್ರೀಕೃಷ್ಣನ ಬೃಹತ್ತಾದ ಕಲ್ಲಿನ ಮಂದಿರವನ್ನು ನಿರ್ಮಿಸಿದ ಸಮಯದಲ್ಲೇ ಬಲರಾಮಬಸುವಿನ ತಾತನೂ ಸಹ ಈ ಕುಂಜವನ್ನು ನಿರ್ಮಿಸಿದ್ದರು. ಲಾಲಾಬಾಬುಗಳು ಬಹಳ ಗೌರವರ್ಣದವರಾದ್ದರಿಂದ ವ್ರಜನಿವಾಸಿಗಳು ಅವರಿಗೆ 'ಲಾಲಾಬಾಬು' ಎಂಬ ಹೆಸರನ್ನಿಟ್ಟಿದ್ದರು. ಅವರಿಗೆ ಹೋಲಿಸಿದರೆ ಬಸು ಮಹಾಶಯರು ಕಪ್ಪಗಿದ್ದುದರಿಂದ ಇವರಿಗೆ 'ಕಾಲಾಬಾಬು' ಎನ್ನುತ್ತಿದ್ದರು.



**ಕಾಲಾಬಾಬುವಿನ ಕುಂಜ, ವೃಂದಾವನ**

ಶ್ಯಾಮಸುಂದರನ ಮಂದಿರದಿಂದ ಇಬ್ಬರಿಗೂ ಸಹ ಎರಡೂ ಹೊತ್ತು ಪ್ರಸಾದ ತಲುಪುತ್ತಿತ್ತು. ಬಾಬುರಾಮ್ ಮಹಾರಾಜರು ಅಲ್ಪಾಹಾರಿಯಾದ್ದರಿಂದ ಪ್ರಸಾದದ ಹೆಚ್ಚಿನ ಅಂಶವನ್ನು ಕಾಳೀ ಕೃಷ್ಣರೇ ತಿನ್ನುತ್ತಿದ್ದರು. ಇವರುಗಳ ಖರ್ಚನ್ನು ಬಲರಾಮ ಬಾಬು ಗಳ ಪತ್ನಿಯವರೇ ವಹಿಸಿಕೊಳ್ಳುತ್ತಿದ್ದರು. ಮಹಡಿಯಲ್ಲಿ ಎಡಗಡೆ ಇದ್ದ ದೊಡ್ಡ ಕೊಠಡಿಯಲ್ಲಿ ಇವರು ಇರುತ್ತಿದ್ದರು. ಕೆಳಗಡೆ ಇದ್ದ ಕೊಠಡಿಯಲ್ಲಿ ವೃದ್ಧ ಬ್ರಹ್ಮಚಾರಿಗಳೊಬ್ಬರು ಬಹಳ ಹಿಂದಿ ನಿಂದಲೂ ವಾಸವಾಗಿದ್ದರು. ಬಹುಶಃ ಅದೇ ಸ್ಥಳದವರಿರಬೇಕು. ಪೈಲ್ವಾನರಂತೆ ತುಂಬ ದಪ್ಪ-ಎತ್ತರದ ಮೈಕಟ್ಟು. ಯಾರೊಂದಿಗೂ ಹೆಚ್ಚಾಗಿ ಬೆರೆಯುತ್ತಿರಲಿಲ್ಲ, ತಮ್ಮ ಪಾಡಿಗೆ ತಾವಿರುತ್ತಿದ್ದರು.

ಕಾಳೀಕೃಷ್ಣರಿಗೆ ಬಹಳ ಇಚ್ಛೆ ಇದ್ದರೂ ಸಹ ಬಾಬುರಾಮ್ ಮಹಾರಾಜರು ತಮ್ಮ ಸೇವೆ ಮಾಡಲು ಹೆಚ್ಚಾಗಿ ಬಿಡುತ್ತಿರಲಿಲ್ಲ. ಆದರೂ ಕಾಳೀಕೃಷ್ಣರು ಮನೆ ಗುಡಿಸುವುದು, ಬಾವಿಯಿಂದ ನೀರು ತರುವುದು, ಪೂಜೆಗೆ ಅಣಿಮಾಡಿ ಕೊಡುವುದು ಮುಂತಾದ ಸಾಧಾರಣ ಕೆಲಸಗಳನ್ನು ಮಾಡುತ್ತಿದ್ದರು. ಬಾಬುರಾಮ್ ಮಹಾ ರಾಜರು ತಮ್ಮದೇ ಆದ ಭಾವದಲ್ಲಿ ತನ್ಮಯರಾಗಿರುತ್ತಿದ್ದರು, ಹೊರಗಿನವರೊಂದಿಗೆ ಹೆಚ್ಚಾಗಿ ಬೆರೆಯುತ್ತಿರಲಿಲ್ಲ. ಕೇವಲ ಸಂಜೆ ಹೊತ್ತು ಗೋವಿಂದಜೀ, ರಾಧಾರಮಣ, ಕೃಷ್ಣಚಂದ್ರ, ಗೋಪೇ ಶ್ವರ ಶಿವ ಮುಂತಾದ ದೇವಾಲಯಗಳಿಗೆ ಹೋಗುತ್ತಿದ್ದರು.

‘ಭಕ್ತಮಾಲ’[೪] ಎಂಬ ವೈಷ್ಣವ ಸಾಧುಗಳೊಬ್ಬರು ಬಾಬು ರಾಮ್ ಮಹಾರಾಜರಲ್ಲಿಗೆ ಬಹಳವಾಗಿ ಬರುತ್ತಿದ್ದರು, ಅವರನ್ನು ಬಹುವಾಗಿ ಗೌರವಿಸುತ್ತಿದ್ದರು. ಮಹಾರಾಜರೂ ಸಹ ಅವರನ್ನು ತುಂಬ ಪ್ರೀತಿಸುತ್ತಿದ್ದರು. ‘ಝೂಲನ್’[೫] (ಉಯ್ಯಾಲೆ ಉತ್ಸವ) ಸಮಯದಲ್ಲಿ ಈ ಭಕ್ತಮಾಲನನ್ನು ಕರೆದುಕೊಂಡು, ಕಾಳೀಕೃಷ್ಣ ರೊಡಗೂಡಿ ಬಾಬುರಾಮ್ ಮಹಾರಾಜರು ವ್ರಜಮಂಡಲದ ಪ್ರಮುಖ ತೀರ್ಥದರ್ಶನಕ್ಕೆ ಹೊರಟರು. ಮೊದಲು ಮಥುರೆಗೆ ಹೋಗಿ ಸ್ನಾನ-ದರ್ಶನ ಮಾಡಿಕೊಂಡು ‘ಎಕ್ಕಾ’ ಗಾಡಿಯಲ್ಲಿ ಗೋವರ್ಧನ ಮತ್ತು ರಾಧಾಕುಂಡಕ್ಕೆ ಹೋಗಿ ಅಲ್ಲೇ ಒಂದೆರಡು ರಾತ್ರಿ ಕಳೆದರು. ಹಗಲಲ್ಲಿ ದೇವಸ್ಥಾನಗಳಲ್ಲಿ ಪ್ರಸಾದ ಪಡೆಯು ತ್ತಿದ್ದರು, ರಾತ್ರಿ ಭಕ್ತಮಾಲರು ಮಧುಕರಿ ಮಾಡಿ ತರುತ್ತಿದ್ದರು. ಅಲ್ಲಿಂದ ಮುಂದಕ್ಕೆ ಅವರು ಕಾಲ್ನಡಿಗೆಯಲ್ಲೇ ಹೊರಟರು. ಗ್ರಾಮದ ಕಡೆ ರಸ್ತೆಯಂಚಿನ ಮುಳ್ಳುಬೇಲಿ ಮುರಿದು, ಅದರ ಮುಳ್ಳು ರಸ್ತೆಯ ಮಣ್ಣಿನೊಂದಿಗೆ ಬೆರೆತಿರುತ್ತದೆಂದು ಭಕ್ತಮಾಲರು ಇವರುಗಳಿಗೆ ಬೂಟುಗಳನ್ನು ಕೊಂಡುಕೊಳ್ಳಲು ಹೇಳಿದರು. ಆದರೆ ವ್ರಜಧಾಮ ಪುಣ್ಯಭೂಮಿಯೆಂದು ಚರ್ಮದ ಬೂಟನ್ನು ಹಾಕಿಕೊಳ್ಳಲು ಬಾಬುರಾಮ್ ಮಹಾರಾಜರು ಏನು ಮಾಡಿದರೂ ಒಪ್ಪಲಿಲ್ಲ. ಬದಲಾಗಿ ಎರಡಾಣೆಯ ಬಟ್ಟೆಯ ಚಪ್ಪಲಿ ಹಾಕಿಕೊಳ್ಳು ತ್ತಿದ್ದರು. ಅವರ ಕತ್ತಿನಿಂದ ಇಳಿಬಿದ್ದಿದ್ದ ಬಟ್ಟೆಯ ಥೈಲಿಯಲ್ಲಿ ಶ್ರೀರಾಮಕೃಷ್ಣರ ಕಟ್ಟುಹಾಕಿದ ಭಾವಚಿತ್ರ, ಅದನ್ನು ಕೂರಿಸುವ ಒಂದು ಆಸನ ಮತ್ತು ಜಪದ ಮಾಲೆ ಇರುತ್ತಿತ್ತು.

ಈ ಯಾತ್ರೆಯ ಸಮಯದಲ್ಲಿ ಕಾಲಿಗೆ ಮುಳ್ಳು ಚುಚ್ಚಿದರೂ ಸಹ ಬಾಬೂರಾಮ್ ಮಹಾರಾಜರು ಅದನ್ನು ಲೆಕ್ಕಿಸುತ್ತಿರಲಿಲ್ಲ. ತದೇಕಚಿತ್ತದಿಂದ ಮಾಲೆಯನ್ನು ಹಿಡಿದು ಜಪಿಸುತ್ತ ನಡೆಯು ತ್ತಿದ್ದರು, ಹೆಚ್ಚಾಗಿ ಮಾತನಾಡುತ್ತಿರಲಿಲ್ಲ. ಬೆಳಿಗ್ಗೆಯಿಂದ ಹಿಡಿದು ಮಧ್ಯಾಹ್ನ ೧೧-೧೨ರವರೆಗೂ ನಡೆದು, ಅವರೆಲ್ಲ ಯಾವುದಾದ ರೊಂದು ಸಾಧುಗಳ ಬಿಡಾರವನ್ನು ಸೇರುತ್ತಿದ್ದರು. ಅಲ್ಲಿಯ ಸಾಧುಗಳು ಬಹಳ ಉಪಚರಿಸಿ ಊಟ ಬಡಿಸುತ್ತಿದ್ದರು. ರಾತ್ರಿ ಅಲ್ಲಿಯೇ ಕಳೆಯುತ್ತಿದ್ದರು. ಕೆಲವೊಮ್ಮೆ ಬಿಡಾರ ತಲುಪಲು ತುಂಬ ತಡವಾಗುತ್ತಿತ್ತು; ಬಾಬಾಜಿಗಳ ಊಟವೂ ಮುಗಿದಿರು ತ್ತಿತ್ತು. ಆದರೂ ತುಂಬ ಪ್ರೀತಿಯಿಂದ ಮತ್ತೆ ಚಪಾತಿ, ಝೋಲ್ (ತರಕಾರಿ ಹಾಕಿ ಬೇಯಿಸಿದ ಪದಾರ್ಥ) ತಯಾರಿಸಿ ಈ ಮೂವ ರನ್ನೂ ಉಪಚರಿಸುತ್ತಿದ್ದರು. ಈ ರೀತಿಯಲ್ಲಿ ಅವರು ಕುಸುಮ ಸರೋವರದಿಂದ ರಾಧಾರಾಣಿಯ ಜನ್ಮಸ್ಥಳವಾದ ವರ್ಷಾಣಾ ಗ್ರಾಮವನ್ನು ತಲುಪಿದರು. ಅಲ್ಲಿಯ ರಾಮಾಯತ ಸಾಧುಗಳ ಬಿಡಾರವೊಂದರಲ್ಲಿ ಇಳಿದುಕೊಂಡರು. ಕಾಳೀಕೃಷ್ಣರ ಮಾತಿನಲ್ಲಿ ಆ ದಿನಗಳ ಸ್ಮೃತಿಯು ತುಂಬ ಸ್ವಾರಸ್ಯಕರವಾಗಿದೆ:

‘‘ಅಂದು ಅಲ್ಲಿ ಸಾಧುಗಳಿಗೆ ‘ಭಂಡಾರ’ (ಭೋಜನ ಸೇವೆ) ಎಂದು ಕೇಳಿದೆ; ಸುಮಾರು ೪೦-೫೦ ಮಂದಿ ಸಾಧುಗಳು ನೆರೆ ದಿದ್ದರು. ಊಟಕ್ಕೆ ಕುಳಿತಾಗ ಎರಡೋ ಮೂರೋ ಗಂಟೆಯಾ ಗಿತ್ತು. ಊಟ ತಡವಾಗುತ್ತಿದ್ದದನ್ನು ಕಂಡು ಕೆಲವರು ಚಡಪಡಿಸ ಲಾರಂಭಿಸಿದರು. ಅದನ್ನು ಕಂಡ ಇತರ ಸಾಧುಗಳು ಹೇಳು ತ್ತಿದ್ದರು ‘ಅರೇ ಜೀ, ಆಜ್ ಮೀಠಾ ಪಲಾವ್!’ (ಅರೇ ತಡಿ ಯಪ್ಪಾ! ಇಂದು ಸಿಹಿ ಪಲಾವ್!) ಎಂದು. ಅದನ್ನು ಕೇಳಿ ನಾನು ಅದೆಂಥಾ ಅಪೂರ್ವ ಖಾದ್ಯವೋ ಎಂದುಕೊಂಡೆ! ತಿನ್ನಲು ಕುಳಿ ತಾಗ ನೋಡಿದರೆ, ಬೆಲ್ಲದ ರಸದಲ್ಲಿ ಅಕ್ಕಿಯನ್ನು ಬೇಯಿಸಿದ, ಒಣ ಉಂಡುಂಡೆ ಪದಾರ್ಥ; ಅದೇ ಅವರ ಮೀಠಾ ಪಲಾವ್!!

---

೪ ಇವರಿಗೆ ‘ಭಕ್ತಮಾಲ’ ಎಂಬ ಗ್ರಂಥವು ಪೂರ್ತಿ ಕಂಠಪಾಠವಾಗಿತ್ತು. ರಾತ್ರಿ ೩ ಗಂಟೆಗೆ ನಿದ್ರೆಯಿಂದೆದ್ದು, ಇಡೀ ಗ್ರಂಥವನ್ನು ರಾಗವಾಗಿ ಆವೃತ್ತಿ ಮಾಡುತ್ತಿದ್ದರು.

೫ ರಾಧಾ-ಕೃಷ್ಣ ಇಬ್ಬರ ವಿಗ್ರಹಗಳನ್ನು ಅಲಂಕರಿಸಿದ ಉಯ್ಯಾಲೆಯಲ್ಲಿಟ್ಟು ತೂಗಿ, ನರ್ತಿಸುತ್ತ ನಡೆಸುವ ಉತ್ಸವ. ಆಗಸ್ಟ್ ತಿಂಗಳ ಹುಣ್ಣಿಮೆಯಂದು ವೃಂದಾ ವನದ ಎಲ್ಲ ದೇವಾಲಯಗಳಲ್ಲೂ ಈ ಉತ್ಸವವನ್ನು ಆಚರಿಸುತ್ತಾರೆ.

ಹೆಚ್ಚಾಗಿ ಹಾಕಿಸಿಕೊಂಡೆ. ಹಸಿವಿನ ಭರದಲ್ಲಿ ೮-೧೦ ತುತ್ತು ತಿಂದ ನಂತರ ಏನು ಮಾಡಿದರೂ ಮುಂದೆ ಗಂಟಲಿನಿಂದ ಕೆಳಗಿಳಿಯುತ್ತಲೇ ಇಲ್ಲ. ಕಡೆಗೂ ಹೇಗೋ ಮಾಡಿ ಅದರಿಂದಲೇ ಹೊಟ್ಟೆ ತುಂಬಿಸಿಕೊಂಡು, ರಾತ್ರಿಯನ್ನು ಅಲ್ಲೇ ಕಳೆದೆ. ಬೆಳಗಿನಿಂದ ಸುತ್ತಾಡಿ ಕಾಲು ಬೇರೆ ಊದಿಕೊಂಡಿತ್ತು. ಭಕ್ತಮಾಲನು ಸ್ವಲ್ಪ ಅಫೀಮವನ್ನು ತಂದುಕೊಟ್ಟನು. ಅದನ್ನು ಸಾಸಿವೆ ಎಣ್ಣೆಯಲ್ಲಿ ಹಾಕಿ ಕಾಯಿಸಿ, ಕಾಲಿಗೆ ತಿಕ್ಕಿಕೊಂಡು ಮಲಗಿದೆ. ಬೆಳಗ್ಗೆ ಎಲ್ಲಾ ನೋವು, ಊತ ಹೊರಟುಹೋಗಿತ್ತು.''

ಸಾಧುಗಳ ಬಿಡಾರವು ಏಕಾಂತವಾಗಿರಲಿಲ್ಲ. ಆದ್ದರಿಂದ ಅವರು ವರ್ಷಾಣಾದ ಶ್ರೀಜೀ ಬೆಟ್ಟದ ಮುಂದಿದ್ದ, ಕಾಡಿನಿಂದ ಆವೃತವಾದ ಮತ್ತೊಂದು ಬೆಟ್ಟದ ಖಾಲಿ ಮನೆಯೊಂದರಲ್ಲಿ ಇಳಿದುಕೊಂಡರು. ಮಧುಕರಿ ಮತ್ತು ದರ್ಶನಾದಿಗಳಿಗಾಗಿ ಕೆಳಗೆ ಇಳಿಯುತ್ತಿದ್ದರು.[೬] ಗ್ರಾಮಗಳ ಮೂಲಕ ಹೋಗುವಾಗ ಬೃಂದಾವನದ ಸ್ತ್ರೀಯರು ಬಂದು ಬಾಗಿಲಲ್ಲಿ ನಿಲ್ಲುತ್ತಿದ್ದರು. ಬಾಬುರಾಮ್ ಮಹಾರಾಜರು ಸ್ತ್ರೀಯರನ್ನು ರಾಧಾರಾಣಿಯ ಸಂಗಾತಿಗಳೆಂಬ ದೃಷ್ಟಿಯಿಂದ ಅತ್ಯಂತ ವಿನಮ್ರಭಾವದಿಂದ 'ರಾಧೇ ರಾಧೇ' ಎಂದು ಹೇಳಿ ಅಭಿನಂದಿಸುತ್ತಿದ್ದರು. ಅವರೂ ಸಹ ಮಹಾರಾಜರನ್ನು ರಾಧಾರಾಣಿಯ ಸಹಚರಿಯೆಂದೇ ಭಾವಿಸಿ 'ಲಾಲೀ ಲಾಲೀ' ಎನ್ನುತ್ತಾ ಬಾಲಸಹಜ ಹುಡುಗಾಟದಿಂದ ಇವರ ಉತ್ತರೀಯವನ್ನು ಹಿಡಿದು ಎಳೆದಾಡಿ ನಗುತ್ತಿದ್ದರು. ಬಾಬುರಾಮ್ ಮಹಾರಾಜರು ಆ ಶುದ್ಧಭಾವವನ್ನು ಕಂಡು ಮುಗ್ಧರಾಗಿ ನಮಸ್ಕರಿಸುತ್ತಿದ್ದರು, ಅವರಲ್ಲೇ ಒಬ್ಬರಾಗಿಬಿಡುತ್ತಿದ್ದರೋ ಎಂಬಂತೆ.

ವರ್ಷಾಣಾದ ಗಾಳಿ, ನೀರು ಎಷ್ಟು ಆರೋಗ್ಯಕರವಾಗಿತ್ತೆಂದರೆ, ತುಂಬ ಹಸಿವಾಗುತ್ತಿತ್ತು. ಏಕಾದಶಿಯ ದಿನ ಭಕ್ತಮಾಲನು 'ವ್ರಜಧಾಮದ ನಿಯಮದಂತೆ ವೈಷ್ಣವ ಬಾಬಾಜಿಗಳೆಲ್ಲ ಉಪವಾಸ ಮಾಡುತ್ತಾರೆ, ಮಧುಕರಿ ಮಾಡಲು ಹೋಗುವುದು ಅಪಮಾನಕರ' ಎಂದು ಹೇಳಿದ. ಆದ್ದರಿಂದ ಅಂದು ಅವರೆಲ್ಲರೂ ಏನನ್ನೂ ತಿನ್ನುವುದಿಲ್ಲವೆಂದು ನಿಶ್ಚಯಿಸಿಕೊಂಡರು. ಬೆಳಗ್ಗೆ ಸ್ನಾನಾದಿಗಳನ್ನು ಮುಗಿಸಿ ೧೨ ಗಂಟೆಯವರೆಗೆ ಜಪ-ಧ್ಯಾನದಲ್ಲಿ ಕಳೆದರು. ತದನಂತರ ಬಾಬುರಾಮ್ ಮಹಾರಾಜರು ನಗುತ್ತಾ ಕೇಳಿದರು, ''ಏನು ಕಾಳೀಕೃಷ್ಣ? ಹೇಗಿದೆ?'' ಕಾಳೀಕೃಷ್ಣರು ಉತ್ತರಿಸಿದರು, ''ನನಗಂತೂ ಭಯಂಕರ ಹಸಿವಾಗಿದೆ.'' ಬಾಬುರಾಮ್ ಮಹಾರಾಜರು, ''ನನಗೂ ಅಷ್ಟೇಪ್ಪ! ಏನು ಮಾಡೋದೀಗ ಹೇಳು'' ಎಂದರು. ಸ್ವಲ್ಪ ಸಮಯದ ನಂತರ ಮತ್ತೆ ಹೇಳಿದರು,''ಇನ್ನು ತಡೆಯಲು ಸಾಧ್ಯವಿಲ್ಲ. ನಡೆ, ಬೈರಾಗಿಗಳ ಬಿಡಾರಕ್ಕೆ! ಏನಾದರೂ ಸ್ವಲ್ಪ ಸಿಗುತ್ತೋ ಇಲ್ಲವೋ ನೋಡೋಣ!'' ಬಿಡಾರಕ್ಕೆ ಹೋಗಿ ಸಾಧುಗಳನ್ನು 'ರಾಧೇ ರಾಧೇ' ಎಂದು ಅಭಿನಂದಿಸಿ ಕುಳಿತರು. ಸ್ವಲ್ಪ ಹೊತ್ತು ಮಾತುಕತೆಯಾಡಿದ ನಂತರ ಬಾಬುರಾಮ್ ಮಹಾ



ಶ್ರೀರಾಧೆಯ ಮಂದಿರ, ವರ್ಷಾಣಾ (ರಾಧೆಯ ಜನ್ಮಸ್ಥಳ)

ರಾಜರು, ''ಬಹುತ್ ಭೂಕ್ ಲಗಾ, ಕುಛ್ ಖಿಲಾನಾ ಸಕತೇ ಹೋ?'' (ತುಂಬ ಹಸಿವಾಗಿದೆ. ಏನಾದರೂ ನೀಡಲು ಸಾಧ್ಯವೆ?) ಎಂದರು. ಅದನ್ನು ಕೇಳಿದ ಅವರು 'ಜರೂರ್ ಮಹಾರಾಜ್, ಅಭೀ ಬನಾ ದೇತಾ' (ಖಂಡಿತ ಮಹಾರಾಜ್ ಈಗಲೇ ಮಾಡಿ ಕೊಡುವೆ) ಎಂದರು. ಅರ್ಧಗಂಟೆಯೊಳಗಾಗಿ ಚಪಾತಿ ಮತ್ತು ಸೊಪ್ಪಿನ ಝೋಲನ್ನು ತಯಾರಿಸಿಕೊಟ್ಟರು. ಅರ್ಧ ಇಂಚು ದಪ್ಪ, ಹತ್ತು ಇಂಚಿನಷ್ಟು ವ್ಯಾಸವುಳ್ಳ ಆರು ಬಿಸಿಬಿಸಿ ಚಪಾತಿಗಳು; ಹಸಿದ ಬಾಯಿಗೆ ಅಮೃತದಂತಿತ್ತು. ಬಾಬುರಾಮ್ ಮಹಾರಾಜರು ಒಂದೂವರೆ ಚಪಾತಿ ತಿಂದರು, ಉಳಿದ ನಾಲ್ಕೂವರೆ ಚಪಾತಿಗಳನ್ನು ಕಾಳೀಕೃಷ್ಣರೇ ಉಡಾಯಿಸಿದರು. ಹಸಿದ ಬಾಯಿಗೆ ಅಮೃತವೆರೆದಂತಾಯಿತು. ಹಸಿವು ಇಂಗಿದ ಮೇಲೆ ವಿಶ್ರಾಂತಿಗಾಗಿ ತಾವು ಇಳಿದುಕೊಂಡಿದ್ದ ಮನೆಗೆ ಹಿಂದಿರುಗಿ ಅವರಂದುಕೊಂಡರು, 'ಆಯ್ತಪ್ಪ, ಇವತ್ತಿನ ಮಟ್ಟಿಗೆ ನಿಶ್ಚಿಂತೆ' ಅಂತ. ಆದರೆ ಸಂಜೆಯಾಗುತ್ತಿದ್ದಂತೆಯೇ ಇಬ್ಬರಿಗೂ ವಿಪರೀತ ಹಸಿವು! ಮತ್ತೆ ಭಕ್ತಮಾಲನಿಗೆ ಹೇಳಬೇಕಾಯಿತು, 'ಹೋಗು ನೋಡೋಣ, ಏನಾದರೂ ಸ್ವಲ್ಪ ಭಿಕ್ಷೆ ಸಿಗುತ್ತೋ ಅಂತ.' ಭಕ್ತಮಾಲನು ಒಂದು ಗಂಟೆಯ ನಂತರ ಒಂದು ಜೋಳಿಗೆ ತುಂಬ ಭಿಕ್ಷೆ ತುಂಬಿಕೊಂಡು ಬಂದ. ಅದನ್ನು ತಿಂದ ನಂತರವೇ ಇವರಿಬ್ಬರ ಜಠರಾನಲ ಶಾಂತವಾಯಿತು!

ಮತ್ತೊಮ್ಮೆ ಮಧುಕರಿಯ ವೇಳೆ ನಡೆದ ಘಟನೆಯೊಂದರ ನೆನಪು: ''ಒಂದು ದಿನ ಸಂಜೆಯ ನಂತರ ಒಂದು ಗ್ರಾಮಕ್ಕೆ ಹೊಕ್ಕಾಗ, ಒಬ್ಬ ಗೃಹಸ್ಥನ ಧಾನ್ಯದ ಉಗ್ರಾಣಕ್ಕೆ ಬೆಂಕಿ ಹತ್ತಿಕೊಂಡು, ಎಲ್ಲ ಭಸ್ಮವಾಗಿ, ಎಲ್ಲರೂ ಅತ್ತು ದುಃಖಿಸುತ್ತಿದ್ದುದನ್ನು ಕಂಡೆ. ನಾವು ಸ್ವಲ್ಪ ಹೊತ್ತು ನಿಂತಿದ್ದು, ಇನ್ನೇನು ಹೊರಡುವುದರಲ್ಲಿದ್ದೆವು. ಅದನ್ನು ಕಂಡ ಮನೆಯ ಯಜಮಾನ ನಮ್ಮನ್ನು ಕರೆದು, ಕೈಜೋಡಿಸಿ, ದೈನ್ಯತೆಯಿಂದ, ''ಮಹಾರಾಜ್ ನಾವು ಅದೆಷ್ಟು ಪಾಪ ಮಾಡಿದ್ದೆವೋ ಏನೋ, ಅದರ ಫಲವಾಗಿ ಈ ರೀತಿ ಸರ್ವನಾಶವಾಯಿತು. ಇದರ ಮೇಲೆ ನೀವು ಸಾಧುಗಳು; ಭಿಕ್ಷೆ ತೆಗೆದುಕೊಳ್ಳದೆ ಹಿಂತಿರುಗಿದರೆ ಇನ್ನೂ ವಿಷಮ ವಿಪತ್ತು ಕಾದಿರುತ್ತದೆ. ನೀವು ಕೃಪೆಯಿಟ್ಟು, ಸ್ವಲ್ಪ ಹೊತ್ತು ಇಲ್ಲೇ ಇರಿ. ನಾವು ರೊಟ್ಟಿ ಮಾಡಿ ತರುವೆವು'' ಎಂದ. ನಾವು ಎಷ್ಟು ಬೇಡವೆಂದರೂ ಕೇಳಲೇ ಇಲ್ಲ, ರೊಟ್ಟಿಯನ್ನು ತಯಾರಿಸಿಯೇ ಕೊಟ್ಟರು.''

೬ ಭಕ್ತಮಾಲನು, 'ಎಲ್ಲರೂ ಏಕೆ ಕಷ್ಟಪಡಬೇಕು? ನಾನೇ ನಿಮಗೂ ಭಿಕ್ಷೆ ತರುತ್ತೇನೆ' ಎಂದು ಬಹಳ ಬೇಡಿಕೊಂಡ. ಆಗಿನಿಂದ ಆತನೇ ಮಧುಕರಿ ಮಾಡಿ ತರುತ್ತಿದ್ದ, ಎಲ್ಲರೂ ಅದನ್ನು ಸ್ವೀಕರಿಸುತ್ತಿದ್ದರು.

ವರ್ಷಾಣಾದಿಂದ ಹೊರಟು ಈ ಮೂವರೂ ಸಂಕೇತಗ್ರಾಮ ಮತ್ತು ನಂದಗ್ರಾಮವನ್ನು ನೋಡಿಕೊಂಡು ಬಂದರು. ವರ್ಷಾಣಾ ರಾಧಾರಾಣಿಯ, ಮತ್ತು ನಂದಗ್ರಾಮ ಶ್ರೀಕೃಷ್ಣನ ಜನ್ಮಸ್ಥಾನ. ಇವೆರಡರ ಮಧ್ಯದ ಗ್ರಾಮವೇ 'ಸಂಕೇತ'. ರಾಧಾ-ಕೃಷ್ಣರು ಇಲ್ಲಿಂದಲೇ ಪರಸ್ಪರರಿಗೆ ಸಂಕೇತಗಳನ್ನು ಕಳುಹಿಸುತ್ತಿದ್ದರೆಂದು ಪ್ರತೀತಿ. ಇವರು ಅಲ್ಲಿದ್ದಾಗ 'ಝೂಲನ್ ಉತ್ಸವ' ಬಂದೇ ಬಿಟ್ಟಿತು; ನಂದಿಗ್ರಾಮ ಮತ್ತು ವರ್ಷಾಣಾದ ಸ್ತ್ರೀಪುರುಷರ ನಡುವೆ ನಡೆಯುವ ಕೃತಕ ಯುದ್ಧವನ್ನು ನೋಡಿ ಅವರು ತುಂಬ ಆನಂದಿಸಿದರು. ಪುರುಷರು ಚರ್ಮದ ಕೋಲು ಮತ್ತು ಮಾರುದ್ದದ ಲಾಠಿಯನ್ನೂ, ಸ್ತ್ರೀಯರು ಅದೇ ತರಹದ ಲಾಠಿ ಮತ್ತು ಇಟ್ಟಿಗೆಯ ಚೂರುಗಳನ್ನು ಎಸೆಯುತ್ತ ಯುದ್ಧ ಮಾಡುತ್ತಾರೆ. ವರ್ಷಾಣಾದಲ್ಲಿ ಹೀಗೆ ಅವರು ಒಂದು ತಿಂಗಳನ್ನು ಆನಂದದಿಂದ ಕಳೆದು, ಕಾಲ್ನಡಿಗೆಯಲ್ಲಿ ಗೋವರ್ಧನ ಮತ್ತು ರಾಧಾಕುಂಡಕ್ಕೆ ಹೋದರು. ಬಳಿಕ ಎಕ್ಕಾಗಾಡಿ, ರೈಲಿನ ಮೂಲಕ ವೃಂದಾವನಕ್ಕೆ ಮರಳಿದರು. ಅವರ ನೆನಪಿನಿಂದ:

''ಬೆಳಗಿನಿಂದ ನಡೆದು ಮಧ್ಯಾಹ್ನದ ಹೊತ್ತಿಗೆ ಯಾವುದಾದರೂ ರಾಮಾಯತ ವೈಷ್ಣವ ಸಾಧುಗಳ ಬಿಡದಿಗೆ ತಲುಪುತ್ತಿದ್ದೆ. ಬೇರೆ ಸಾಧುಗಳು, ಅಭ್ಯಾಗತರೊಂದಿಗೆ ಚಪಾತಿ, ದಾಲ್ ಅಥವಾ ಸೊಪ್ಪಿನ ಝೋಲನ್ನು ಪ್ರಸಾದವಾಗಿ ಪಡೆಯುತ್ತಿದ್ದೆ. ರಾತ್ರಿ ಅಂಗಳದಲ್ಲಿದ್ದ ಮರದ ಬುಡದಲ್ಲಿ ಧುನಿಯ ಮುಂದೆ ಕಂಬಳಿ ಹಾಸಿ ನಿದ್ರಿಸುತ್ತಿದ್ದೆ. ಬಿಡದಿಯ ಬಡ ಸಾಧುಗಳು ಅತಿಥಿ ಅಭ್ಯಾಗತರಿಗೆ ಪ್ರೀತಿಯಿಂದ ಉಪಚರಿಸಿ, ಶ್ರದ್ಧಾ-ಭಕ್ತಿಗಳಿಂದ ಉಣಬಡಿಸುವುದನ್ನು ಕಂಡು ನಾನು ಆಶ್ಚರ್ಯಗೊಂಡೆ. ಸಾಧುಗಳನ್ನು ಕಂಡರೆ ಸಾಧುಗಳಿಗೆ ಅದೆಂತಹ ಪ್ರೇಮ, ತಮ್ಮ ಸ್ವಂತದವರೇ ಏನೋ ಎಂಬಂತೆ.''

ಸ್ವಾಮಿ ವಿವೇಕಾನಂದರ ಗುರುಭಾಯಿಗಳಾದ ಬಾಬುರಾಮ್ ಮಹಾರಾಜರು ಬೃಂದಾವನಕ್ಕೆ ಬಂದಿದ್ದಾರೆಂದು ಕೇಳಿ, ರಾಮಸ್ನೇಹಿ[೭] ಎಂಬ ಹೆಸರಿನ ಆಳ್ವಾರಿನ ವೈಷ್ಣವ ಭಕ್ತನೊಬ್ಬನು ಅವರನ್ನು ಭೇಟಿಯಾಗಲು ಬಂದನು. ವಿವೇಕಾನಂದರು ಆಳ್ವಾರಿಗೆ ಹೋಗಿದ್ದಾಗ ಅವರಿಂದ ಪ್ರಭಾವಿತನಾಗಿದ್ದ ಈ ಭಕ್ತನು ಅವರ ಬಗ್ಗೆ ಮಾತನಾಡುತ್ತಾ ಭಾವಪರವಶನಾದ; ಅವನ ಕಣ್ಣಿಂದ ಅಶ್ರುಧಾರೆ ಹರಿಯಲಾರಂಭಿಸಿತು. ಅಲ್ಲಿಯ ಜನ ಸ್ವಾಮೀಜಿಯವರನ್ನು ಆಳವಾಗಿ ಪ್ರೀತಿಸಿದ್ದರು, ಈಗಲೂ ಸಹ ಬಹಳಷ್ಟು ಭಕ್ತರು ಅವರ ಪ್ರೇಮದಿಂದ ಆಕರ್ಷಿತರಾಗುತ್ತಿದ್ದಾರೆ ಎಂದು ರಾಮಸ್ನೇಹಿಯ ಬಾಯಿಂದ ಕೇಳಿದ ಬಾಬುರಾಮ್ ಮಹಾರಾಜರು ಮತ್ತು ಕಾಳೀ ಕೃಷ್ಣರು ವಿಸ್ಮಯಗೊಂಡರು.

*(ಮುಂದುವರಿಯುವುದು)*

---

೭ ಸ್ವಾಮಿ ವಿವೇಕಾನಂದರು ಪಾಶ್ಚಾತ್ಯ ದೇಶಗಳಿಂದ ಮರಳಿ ಬಂದ ಮೇಲೆ, ೧೮೯೭ರ ಕೊನೆಯ ಭಾಗದಲ್ಲಿ ಆಳ್ವಾರಿಗೆ ಹೋದರು. ಆಗ ಅವರನ್ನು ಬರಮಾಡಿಕೊಳ್ಳಲು ಅರಮನೆಯ ಹಾಗೂ ಸ್ಥಳೀಯ ಗಣ್ಯ ವ್ಯಕ್ತಿಗಳು ರೈಲ್ವೇ ಸ್ಟೇಷನ್ನಿಗೆ ಬಂದಿದ್ದರು. ಜನಜಂಗುಳಿಯ ಮಧ್ಯೆ ದೂರ ಒಂದೆಡೆ, ಮೂಲೆಯಲ್ಲಿ ಚಿಂದಿ ಬಟ್ಟೆಯನ್ನುಟ್ಟುಕೊಂಡು ಸಂಕೋಚದಿಂದ ನಿಂತಿದ್ದ ಬಡ ರಾಮಸ್ನೇಹಿಯನ್ನು ಕಂಡ ಕೂಡಲೇ ಸ್ವಾಮೀಜಿ, 'ರಾಮಸ್ನೇಹಿ, ರಾಮಸ್ನೇಹಿ' ಎಂದು ಅವನನ್ನು ತಮ್ಮ ಬಳಿಗೆ ಕರೆದರು. ತಮ್ಮ ಪರಿವ್ರಾಜಕ ದಿನಗಳಲ್ಲಿ ಸ್ನೇಹಿತನಾಗಿದ್ದ ಅವನೊಂದಿಗೆ ಅತ್ಯಂತ ಪ್ರೀತಿಯಿಂದ ಮಾಡನಾಡತೊಡಗಿದರು ಸ್ವಾಮೀಜಿ. ವಿಶ್ವವಿಜೇತ ಸ್ವಾಮಿ ವಿವೇಕಾನಂದರ ಸಮದರ್ಶಿತ್ವ ಹಾಗೂ ವಿಶಾಲಹೃದಯಕ್ಕೆ ಇದು ಒಂದು ಒಳ್ಳೆಯ ನಿದರ್ಶನವಾಗಿದೆ.

## ಮಣ್ಣು ತಿಂದ ಬಾಲಕ ಜಗತ್ತನ್ನೇ ಬೆಳಗಿದ..



ಸಾವಿರಾರು ವರ್ಷಗಳಿಗೆ ಮೊದಲು, ಮಥುರಾಪಟ್ಟಣದ ಕಾರಾಗೃಹದೊಳಗೆ ಒಂದು ಮಗು ಹುಟ್ಟಿತು; ವೃಂದಾವನವೆಂಬ ಒಂದು ಗೊಲ್ಲರ ಹಳ್ಳಿಯಲ್ಲಿ ಅದು ಬೆಳೆಯಿತು. ಕೃಷ್ಣನ ಬಾಲಲೀಲೆಯೊಂದಿಗೆ ಅವನ ದೈವೀ ವ್ಯಕ್ತಿತ್ವವೂ ಪ್ರಕಟಗೊಂಡಿತು. ಗೋಪೀಪ್ರೇಮದ ಮೂಲಕ ಭಕ್ತಿ, ಪ್ರೇಮ, ಭಾವಗಳ ಮಹಾಪೂರವೇ ಹರಿಯಿತು. ಪಾಪ, ಮುಗ್ಧ ತಾಯಿ ಯಶೋದೆ ಮಣ್ಣು ತಿನ್ನುತ್ತಿದ್ದ ಮಗುವನ್ನು ಬೆದರಿಸಿ, ''ಕಳ್ಳ! ಮಣ್ಣು ತಿಂದೆಯಾ? ಬಾಯಿ ತೆರೆ!'' ಎಂದಾಗ ಅದು ಬಾಯಿ ತೆರೆದು ಇಡೀ ಬ್ರಹ್ಮಾಂಡವನ್ನೇ ಅಲ್ಲಿ ತೋರಿಸಿಬಿಡುವುದೆ? ಸಾಂಕೇತಿಕವಾಗಿ ನಡೆದ ಈ ಘಟನೆ ಮುಂದೆ ನಿಜವಾಯಿತು. ಪುಟ್ಟ ಕೃಷ್ಣ ಬೆಳೆದ, ಬೃಹತ್ತಾಗಿ ತನ್ನ ವ್ಯಕ್ತಿತ್ವವನ್ನು ಬೆಳೆಸುತ್ತ ಹೋದ; ವಿಶ್ವವ್ಯಾಪಿಯಾಗಿ ಬೆಳೆದ. ಇಡೀ ವಿಶ್ವವನ್ನೆಲ್ಲ ವ್ಯಾಪಿಸಿದ್ದಲ್ಲದೆ, ಅದನ್ನು ಮೀರಿಯೂ ಹತ್ತು ಅಂಗುಲ, ಇನ್ನಷ್ಟು ದೂರ, ಬಹುದೂರ ವ್ಯಾಪಿಸಿದ.

ಮಥುರೆಯ ರಾಜಕೀಯದಲ್ಲಿ ಏರುಪೇರಾಯಿತು. ದುಷ್ಟ ಕಂಸನನ್ನು ಕೊಂದ, ಅಲ್ಲಿ ಶಾಂತಿ ನೆಲೆಸುವಂತೆ ಮಾಡಿದ. ಮುಂದೆ ಕುರುರಾಜ್ಯದ ಯಾದವೀಕಲಹದಲ್ಲಿ ಕೃಷ್ಣನದು ಪ್ರಧಾನ ಪಾತ್ರವಾಯಿತು. ಇತ್ತ ದ್ವಾರಕೆಯಲ್ಲಿ ತನ್ನವರನ್ನು ನೆಲೆಗೊಳಿಸಬೇಕಾಯಿತು. ಮಗಧರಾಜ್ಯದಲ್ಲೂ ಕ್ರೂರ ಜರಾಸಂಧನ ಅಂತ್ಯ ಕಾಣಿಸಿ, ಅವನಿಂದಾಗಿ ನರಳುತ್ತಿದ್ದ ಸಾವಿರಾರು ಮಂದಿ ಜನರನ್ನೆಲ್ಲ ಬಿಡಿಸಬೇಕಾಯಿತು. ಹೀಗೆ ಉತ್ತರ ಭಾರತದುದ್ದಕ್ಕೂ ಕೃಷ್ಣನ ಕಾರ್ಯಕ್ಷೇತ್ರ ವಿಸ್ತರಿಸಿತು. ಕೃಷ್ಣನ ಜೀವಿತಕಾಲದಲ್ಲೇ ಅವನು ದೇವರೆಂದೂ, ಅವತಾರ ಪುರುಷನೆಂದೂ, ಮಹಾಯೋಗಿಯೆಂದೂ, ಸಾಕ್ಷಾತ್ ಪರಬ್ರಹ್ಮನೆಂದೂ ಪೂಜಿಸಲ್ಪಟ್ಟ. ಅವನ ಕಾಲವಾದ ನಂತರ ಎಲ್ಲ ಎಲ್ಲೆಯನ್ನು ಮೀರಿ ಅವನ ದೈವತ್ವ ವ್ಯಾಪಿಸಿತು. ದಕ್ಷಿಣದ ತಿರುವನಂತಪುರದಿಂದ ಹಿಡಿದು ಉತ್ತರದ ಬದರೀನಾಥ, ನೇಪಾಳದವರೆಗೂ, ಪಶ್ಚಿಮದ ದ್ವಾರಕೆಯಿಂದ ಹಿಡಿದು ಪೂರ್ವದ ಮಣಿಪುರದವರೆಗೂ ಲೆಕ್ಕವಿಲ್ಲದಷ್ಟು ಕಡೆ ಅವನ ದೇವಾಲಯಗಳು ತುಂಬಿವೆ. ಇವೆಲ್ಲಕ್ಕಿಂತಲೂ, ಕೃಷ್ಣನ ಶ್ರೀಮುಖದಿಂದ ಹೊರಬಂದ ಗೀತೆ ಕೋಟಿಕೋಟಿ ಮಾನವರ ಹೃದಯಗುಹೆಯನ್ನು ಹೊಕ್ಕು, ಅಂಧಕಾರದಲ್ಲಿ ದಿವ್ಯಜ್ಯೋತಿಯಾಗಿ ಬೆಳಗುತ್ತಿದೆ.